ಸರ್ಕಾರದಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ 'ಬಂದಿದೆ' ಎಂದು ಹೇಳಿದ್ದಾರೆ. ಚಂಗಡಹಳ್ಳಿ ಗ್ರಾಮಕ್ಕೆ ಈಗಾಗಲೇ 1991-92ನೇ ಸಾಲಿನಲ್ಲಿ ಕಿರು ನೀರು ಸರಬರಾಜು ಯೋಜನೆ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಈ ಚಂಗಡಹಳ್ಳಿ ಗ್ರಾಮದಲ್ಲಿ ಹಿಂದಿನ ಜನಸಂಖ್ಯೆ ಆಧಾರದ ಮೇಲೆ ಈ ಕಿರು ನೀರು ಸರಬರಾಜು ಯೋಜನೆಯನ್ನು ಮಾಡಿದ್ದಾರೆ. ಆದರೆ ಈ ಗ್ರಾಮದಲ್ಲಿ ಇವತ್ತಿನ ದಿವಸ ಜನಸಂಖ್ಯೆ ಹೆಚ್ಚಾಗಿರುವುದರಿಂದ ತಮ್ಮ ಮುಖೇನ, ಮಾನ್ಯ ಮಂತ್ರಿಗಳಿಗೆ ಕೇಳುವುದಿಷ್ಟೆ ಈ ಚಂಗಡಹಳ್ಳಿ ಗ್ರಾಮಕ್ಕೆ ಏನು ಕಿರು ನೀರು ಸರಬರಾಜು ಯೋಜನೆಯನ್ನು ಮಾಡಿದ್ದೀರಿ. ಅದನ್ನು ಬೇರೆ ಗ್ರಾಮಕ್ಕೆ ಹಾಕಿ, ಈ ಗ್ರಾಮದಲ್ಲಿ ಈಗ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಈ ಗ್ರಾಮಕ್ಕೆ ಎನ್.ಆರ್.ಡಬ್ಲೂ.ಎಸ್ ಅನ್ನು ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಅದೇ ರೀತಿ ಯಸಳೂರಿನಲ್ಲಿ ಸುಮಾರು 61ನೇ ಇಸವಿಯಲ್ಲಿ ಆ ಯೋಜನೆಯನ್ನು ಹಾಕಿಕೊಂಡು ಇವತ್ತಿನ ದಿವಸ ನೀರು ಸರಬರಾಜು ಮಾಡುತ್ತಿದ್ದಾರೆ. ಈಗಾಗಲೇ ಜಿಲ್ಲಾಪರಿಷತ್ ವತಿಯಿಂದ ಒಂದು ಲಕ್ಷ ರೂಪಾಯಿಯನ್ನು ರಿಪೇರಿಗಾಗಿ ಕೊಟ್ಟಿದ್ದಾರೆ. ಆದರೆ, ಈ ಹಣ ಯಾವುದಕ್ಕೂ ಸಾಲುವುದಿಲ್ಲ. ಆ ಒಂದು ದೃಷ್ಟಿಯಿಂದ ಯಸಳೂರು ಗ್ರಾಮಕ್ಕೂ ಒಂದು ಹೊಸ ಎನ್.ಆರ್.ಡಬ್ಲೂ.ಎಸ್,ಸ್ಕೀಮ್‌ನಲ್ಲಿ ಮಾಡಿಕೊಡಬೇಕೆಂದು ಮಂತ್ರಿಗಳನ್ನು ಕೇಳುತ್ತೇನೆ. ಮತ್ತು ಆನೇಮಹಲ್‌ನಲ್ಲಿ ಇವತ್ತಿನವರೆಗೂ ಇಲ್ಲ, 1992-93ಕ್ಕೆ ಸೇರಿಸುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ದಯಮಾಡಿ ಇದನ್ನು ಮಾಡಿಕೊಡಬೇಕೆಂದು ತಮ್ಮ ಮುಖೇನ ಮಂತ್ರಿಗಳನ್ನು ಕೇಳಿಕೊಳ್ಳುತ್ತಾ, ಇದಕ್ಕೆ ತಮ್ಮಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಚಂಗಡಹಳ್ಳಿ ಮತ್ತು ಯಸಳೂರುಗಳಲ್ಲಿ ಆಗ್‌ಮೆಂಟೇಷನ್ ಪ್ರೋಗ್ರಾಮ್‌ನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥಾದ್ದನ್ನು ಹೇಳಿದ್ದೇವೆ. ಉಳಿದಂಥ ಈ ಆನೇಮಹಲ್ ಗ್ರಾಮ ಕೂಡ 1992-93 ರಲ್ಲಿ ಅಪೆಂಡಿಕ್ಸ್ 'ಸಿ' ನಲ್ಲಿ ಸೇರಿದೆ. ಅದನ್ನೂ ಕೂಡ ತೆಗೆದುಕೊಳ್ಳುತ್ತೇವೆ.

ಶ್ರೀ ಗುರುದೇವ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿರುವುದು ಏನೆಂದರೆ ಚಂಗಡಹಳ್ಳಿಗೆ ಈಗಾಗಲೇ ಒಂದು ಕಿರು ನೀರು ಯೋಜನೆಯನ್ನು ಮಂಜೂರು ಮಾಡಿದ್ದೀರಿ. ಆದರೆ, ಈಗ ಜನಸಂಖ್ಯೆ ಜಾಸ್ತಿಯಾಗಿರುವ ದೃಷ್ಟಿಯಲ್ಲಿ ಆ ಗ್ರಾಮಕ್ಕೆ ಎನ್.ಆರ್.ಡಬ್ಲೂ.ಎಸ್.ನ್ನು ಮಾಡಿಕೊಡಬೇಕು. ಮತ್ತೆ ಯಸಳೂರಿಗೆ ಏನು ಒಂದು ಲಕ್ಷ ರೂಪಾಯಿಯನ್ನು ಕೊಟ್ಟಿದ್ದೀರಿ, ಅದು ಯಾವುದಕ್ಕೂ ಸಾಲುವುದಿಲ್ಲ. ಆದ್ದರಿಂದ ಅಲ್ಲಿಗೂ ಒಂದು ಹೊಸ ಎನ್.ಆರ್.ಡಬ್ಲ್ಯೂ.ಎಸ್.ನ್ನು ಮಾಡಿಕೊಡಬೇಕೆಂದು ತಮ್ಮ ಮುಖೇನ ಕೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾನು ಅದನ್ನು ಎಕ್ಸಾಮಿನ್ ಮಾಡಿಸುತ್ತೇನೆ.

ಗ್ರಾಮೀಣ ಅಭಿವೃದ್ಧಿ ಕಾಮಗಾರಿಗಳು.

(2350) ಶ್ರೀ ಕೆ.ಸಿದ್ದಯ್ಯ (ಸಂತೇಮಾರನಹಳ್ಳಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ. ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ನೀಡುತ್ತಿರುವ ವಿವಿಧ ಸಹಾಯಗಳ ಭೌತಿಕ ಪರಿಶೀಲನೆಯನ್ನು ಜಿಲ್ಲಾ ಪರಿಷತ್ತುಗಳಿಂದ ಆಗುತ್ತಿರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಯಾವುದಾದರೂ ತಾಲ್ಲೂಕುಗಳಲ್ಲಿ ಭೌತಿಕ ಪರಿಶೀಲನೆ ಮಾಡಿರುವ ಬಗ್ಗೆ ಸರ್ಕಾರಕ್ಕೆ ವರದಿಗಳೇನಾದರೂ ಬಂದಿದೆಯೇ?

ಇ ಮಂಡಲ ಪಂಚಾಯ್ತಿಗಳು ವಿವಿಧ ಯೋಜನೆಗಳ ಅಡಿ ಆರಿಸಲ್ಪಟ್ಟಿರುವ ಫಲಾನುಭವಿಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟ ಪಡಿಸುವ ಬಗ್ಗೆ ಹಾಗೂ ರಸ್ತೆ ಮತ್ತು ವಿವಿಧ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ತೆಗೆದುಕೊಳ್ಳುವ ಬಗ್ಗೆ ಮತ್ತು ಅಂದಾಜು ವೆಚ್ಚದ ಬಗ್ಗೆ ಟಾಂ, ಟಾಂ ಮೂಲಕ ತಿಳುವಳಿಕೆ ನೀಡುವಲ್ಲಿ ಸರ್ಕಾರ ಮಂಡಲ ಮಂಚಾಯ್ತಿಗಳಿಗೆ ಸುತ್ತೋಲೆ ಮೂಲಕ ಸೂಚನೆ ನೀಡುತ್ತದೆಯೇ?

ಈ ಸರ್ಕಾರವು ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯಗರ್ಶಿಗಳಿಗೆ ಭೌತಿಕ ಪರಿಶೀಲನೆ ಹಾಗೂ ನಿಯತಕಾಲಿಕ ವರದಿಗಳನ್ನು ಕಳುಹಿಸುವ ಬಗ್ಗೆ ಆದ್ಯ ಗಮನ ನೀಡುವಂತೆ ಕಟ್ಟು ನಿಟ್ಟಾದ ಸೂಚನೆ ನೀಡುವುದೇ?

ಶ್ರಿ ಎಂ.ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕಂದಾಯ ಸಚಿವರು)

ಅ ಇಲ್ಲ.

ಆ ಫಲಾನುಭವಿಗಳು ಪಡೆದ ಆಸ್ತಿಗಳ ಭೌತಿಕ ಪರಿಶೀಲನೆ ಬಗ್ಗೆ ಮಾರ್ಗಸೂಚಿಗಳನ್ನು ಐಆರ್‌ಡಿಪಿ ಮ್ಯಾನುಯಲ್‌ನಲ್ಲಿ ವಿವರಿಸಲಾಗಿದೆ.

ಇ ಇಂಥಹ ಸೂಚನೆಗಳನ್ನು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಜವಾಹರ್ ರೋಜಗಾರ್ ಯೋಜನೆಯ ಮ್ಯಾನುಯಲ್‌ಗಳಲ್ಲಿ ವಿವರಿಸಲಾಗಿದೆ.

ಈ ಹೌದು.

ಶ್ರಿ ಕೆ.ಸಿದ್ದಯ್ಯ:- ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶದ ಫಲಾನುಭವಿಗಳು ಪಡೆದ ಸಹಾಯಗಳ ಭೌತಿಕ ಪರಿಶೀಲನೆ ಮಾಡಿರುವ ಬಗ್ಗೆ ವರದಿ ಬಂದಿದೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಮ್ಯಾನ್ಯುಯಲ್‌ನಲ್ಲಿ ವಿವರಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗೆ ಮ್ಯಾನ್ಯುಯಲ್‌ನಲ್ಲಿ ವಿವರಿಸಿದ್ದರಿಂದಲೇ ನಾನು ಈಗ ಕೇಳುತ್ತಿರುವುದು. ಈಗ ಮಾಡುತ್ತಾ ಇದ್ದೀರಾ ಇಲ್ಲವೇ ಎಂದು ಕೇಳಿದರೆ ಉತ್ತರವಾಗಿ ಮ್ಯಾನ್ಯುಯಲ್‌ನಲ್ಲಿ ವಿವರಿಸಲಾಗಿದೆ ಎಂದು ಹೇಳಿದರೆ ಏನು ಸ್ವಾಮಿ ? ನಾನು ರಿಪೋರ್ಟ್ ಕೊಟ್ಟಿದ್ದೇನೆ ಮತ್ತು ಅಲ್ಲಿ ಇಂಥ ಕೆಲಸಗಳು ಇಲ್ಲಿ ಆಗುತ್ತಾ ಇದೆ ಎಂದು ವಿಷದವಾಗಿ ಎರಡು ಅಧಿವೇಶನಗಳ ಕಾಲದಲ್ಲಿ ಹೇಳಿದ್ದೇನೆ. ನಮ್ಮ ಮೈಸೂರು ಜಿಲ್ಲೆಗೆ ಸಂಬಂಧಪಟ್ಟ ಕಾರ್ಯದರ್ಶಿಯವರು ಬಂದಾಗ ಈ ತರಹ ವೆರಿಫಿಕೇಷನ್ ಆಗುತ್ತಾ ಇಲ್ಲ, ಚೀಫ್ ಸೆಕ್ರೆಟರಿಯವರು ಇಲ್ಲೇ ಇದ್ದಾರೆ ಎಂದು ಹೇಳಿದರೂ ಕೂಡ ಮಾತನಾಡದೇ ಕುಳಿತಿದ್ದರು. ಆದ್ದರಿಂದ ವಿವರಿಸಲಾದಂಥ ವಿಚಾರ ಆಕ್ಟ್‌ನಲ್ಲಿ ಇದೆ. ರೂಲ್ಸ್‌ನಲ್ಲೂ ಇದೆ. ಮ್ಯಾನುಯಲ್‌ನಲ್ಲಿಯೂ ಇದೆ. ಆದರೆ ಈ ಕೆಲಸವನ್ನು ಅವರು ಮಾಡುತ್ತಾ ಇಲ್ಲ, ಹೀಗಾಗಿ ಅಪಾರ ಅನ್ಯಾಯ ಮತ್ತು ನಷ್ಟಗಳು ಆಗುತ್ತಾ ಇವೆ. ಅನೇಕ ರೋಜ್‌ಗಾರ್‌ನಲ್ಲಿ ಮಾಡತಕ್ಕಂಥ ಕೆಲಸಗಳನ್ನು ಸಹ ಅವರು ಮಾಡುತ್ತಾ ಇಲ್ಲ. ಬಿಡಿಓ ರವರನ್ನು ವೇರಿಫೈ ಮಾಡಿ ಎಂದು ನಾನು ಜೊತೆಗೆ ಕರೆದುಕೊಂಡು ಹೋಗಿದ್ದೇನೆ. ರಿಪೋರ್ಟ್ ಕೂಡ ಕೊಟ್ಟಿದ್ದೇನೆ, ಕೆಲಸಗಳನ್ನು ಮಾಡುತ್ತಲೇ ಇಲ್ಲ. ಹೀಗೆ ಕೆಲಸ ಮಾಡದೇ ಇದ್ದವರ ಬಗ್ಗೆ ತಾವುಗಳು ಕ್ರಮಗಳನ್ನು ತೆಗೆದುಕೊಳ್ಳಬೇಕು. ಇನ್ನಾದರೂ ನಾವು ಹೋಗಿ ರಿಪೋರ್ಟ್ ಕೊಟ್ಟ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-ಮಾನ್ಯ ಸದಸ್ಯರು ಇನ್ನು ಮೇಲಾದರೂ ಮಾಡಿ ಎಂದು ಹೇಳಿದ್ದಾರೆ, ಖಂಡಿತವಾಗಿಯೂ ಇನ್ನು ಮೇಲೆ ಮಾಡುತ್ತೇವೆ. ಈಗಲೆ ಮ್ಯಾನುವಲ್‌ನಲ್ಲಿ ಗೈಡ್‌ಲೈನ್ಸ್ ಇದೆ.

ಅಧ್ಯಕ್ಷರು:-ಮಾನ್ಯ ಸಚಿವರಿಗೆ ಹಳೆಯ ಮೈಸೂರು ಕಡೆಯ ಮಾತುಗಳು ಅರ್ಥವಾಗುವುದಿಲ್ಲ. ಅಪಾರವಾದ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಅಪಾರ ಅಂದರೆ ಬಹಳ ಜಾಸ್ತಿ ಅನ್ಯಾಯವಾಗಿದೆ ಎಂದು ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ತಾವುಗಳು ಹೇಳುವುದರಲ್ಲಿ ಅರ್ಥ ಇದೆ. ಈ ಬೆನಿಫಿಶಿಯರ್ಸ್‌ನ್ನು ಐಡೆಂಟಿಫೈ ಮಾಡತಕ್ಕಂಥಾದ್ದನ್ನು ಗ್ರಾಮಸಭೆಗಳನ್ನು ಮಾಡಿ ಮಾಡಬೇಕೆಂದು ಇದೆ. ಈ ಅಧಿಕಾರಿಗಳು ಅಲ್ಲೇ ಕುಳಿತು ತಮಗೆ ಯಾರಿಗೆ ಬೇಕು ಎಂದು ನೋಡಿಕೊಂಡು ಮಂಡಳ ಪ್ರಧಾನರೂ ಅವರು ಸೇರಿ ಮಾಡತಕ್ಕಂಥಾದ್ದುಕೂಡ ಕೆಲವು ಕಡೆಗಳಲ್ಲಿ ಇದೆ. ಅದಕ್ಕಾಗಿಯೇ ಒಂದು ಗೈಡ್‌ಲೈನ್ಸ್‌ನ್ನು ಕೂಡ ನಾವು ಇಶ್ಯೂ ಮಾಡಿದ್ದೇವೆ. ಜವಾಹರ ರೋಜ್‌ಗಾರ್‌ಯೋಜನೆ ಮತ್ತು ಐಆರ್‌ಡಿಪಿ ಯೋಜನೆಯಲ್ಲಿ ಗೈಡ್‌ಲೈನ್ಸ್ ಏನು ಇದೆ, ಅದರ ಪ್ರಕಾರ ನೀವುಗಳು ಮಾಡಬೇಕೆಂದು ಸಂಬಂಧಪಟ್ಟವರಿಗೆ ಸರ್ಕ್ಯುಲರ್ ಕೊಟ್ಟಿದ್ದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ ಎಂಬುದು ಕೂಡ ನಮ್ಮ ಗಮನಕ್ಕೆ ಬಂದಿದೆ. ಇದನ್ನು ನಾನು ಸ್ವತ: ರಾಜ್ಯಮಟ್ಟದಲ್ಲಿ ರಿವ್ಯೂ ಮಾಡಿ ಮುಂದೆ ಏನು ಗೈಡ್‌ಲೈನ್ಸ್ ಕೊಡಬೇಕು ಮತ್ತು ಯಾವರೀತಿಯಾಗಿ ಇದನ್ನು ಇಂಪ್ಲಿಮೆಂಟ್ ಮಾಡಬಹುದು ಎಂದು ನೋಡಿ ಇರುವ ಕುಂದುಕೊರತೆಗಳನ್ನು ಸರಿಪಡಿಸುತ್ತೇನೆ.

ಶ್ರೀ ಕೆ.ಸಿದ್ದಯ್ಯ:-ತಾವು ಗೈಡ್‌ಲೈನ್ಸ್ ಕೊಟ್ಟರೆ ಬಹಳ ಸಂತೋಷ. ಈ ಗೈಡ್‌ಲೈನ್ಸ್ ಪ್ರಕಾರಸಂಬಂಧಪಟ್ಟ ಚೀಫ್ ಸೆಕ್ರೆಟರಿಯವರು ಮತ್ತು ಅಧಿಕಾರಿಗಳು ರಿವ್ಯೂ ರಿಪೋರ್ಟ್ ಕಳುಹಿಸುವ ಹಾಗೆ ಮಾಡುತ್ತೀರಾ ? ಬರೀ ಇನ್‌ಸ್ಟ್ರಕ್ಷನ್ಸ್ ಕೊಟ್ಟರೆ ಈಗಿರತಕ್ಕಂಥ ರೂಲ್ಸ್‌ನಲ್ಲಿ ಮ್ಯಾನುಯಲ್‌ನಲ್ಲಿ ಹೇಗೆ ಇದೆಯೋ ಹಾಗೆಯೇ ಇರುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-ಆಯಿತು, ರಿವ್ಯೂ ಮಾಡಿಸುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ:- ಅಧ್ಯಕ್ಷರೇ ಈ ಫಲಾನುಭವಿಗಳ ಪಟ್ಟಿಯನ್ನು ಮಂಡಲ ಪಂಚಾಯತಿಗಳ ಆಫೀಸಿನ ನೋಟಿಸ್ ಬೋರ್ಡ್‌ನಲ್ಲಿ ಹಾಕುವುದರಿಂದ ಯಾರಾದರೂ ಅರ್ಹರು ಆಯ್ಕೆ ಆಗಿಲ್ಲವಾದರೆ, ಅದನ್ನು ನೋಡಿದ ಜನರು ಅಬ್‌ಜೆಕ್ಷನ್ ರೈಸ್ ಮಾಡಲು ಅನುಕೂಲವಾಗುತ್ತದೆ. ಹಾಗೆ ಮಾಡಿದರೆ ಒಳ್ಳೆಯದು. ಆದ್ದರಿಂದ ದಯವಿಟ್ಟು ಎಲ್ಲ ಮಂಡಲ ಪಂಚಾಯಿತಿಗಳಿಗೆ ಸೂಚನೆ ಕೊಡುತ್ತೀರಾ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆಗಬಹುದು ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ.

ಬೈಲಹೊಂಗಲ ತಾಲ್ಲೂಕು ದೊಡ್ಡವಾಡ ಗ್ರಾಮದಲ್ಲಿ ಕ್ರೀಡಾಂಗಣದ ನಿರ್ಮಾಣ

(2348)ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಯುವಜನಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ದೊಡ್ಡವಾಡ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ಸಿ ಅಂಡ್ ಬಿ, ಬೆಳಗಾಂ, ಇವರು ಸ್ಟೇಡಿಯಂ ಕೆಲಸವನ್ನು ಪ್ರಾರಂಭಿಸಿ ಅರ್ಧಕ್ಕೆ